# ಸರ್ವರಿಗೂ ಸಾರ್ವತ್ರಿಕ ಆರೋಗ್ಯ ರಕ್ಷಣೆ; 'ಆರೋಗ್ಯ ಕರ್ನಾಟಕ'ದ ಅಭಯ

ಕಾಯಿಲೆಯ ಅನುಭವ ಎಲ್ಲರಿಗೂ ಒಂದೆ. ನೋವು, ನರಳಿಕೆ ಇದ್ದೇ ಇರುತ್ತದೆ. ಉಳ್ಳವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಾರೆ. ಬಡವರು ಮತ್ತು ಮಧ್ಯಮ ವರ್ಗದವರಿಗೆ ಆ ಹೊರೆ ಭರಿಸಲು ಆಗುವುದಿಲ್ಲ. ರಾಜ್ಯದಲ್ಲಿ ಉತ್ತಮ ಆರೋಗ್ಯ ವ್ಯವಸ್ಥೆ ಇದ್ದರೂ ಬಡವ– ಬಲ್ಲಿದ, ಹೆಣ್ಣು–ಗಂಡು, ಗ್ರಾಮೀಣವಾಸಿ–ನಗರವಾಸಿ ಎನ್ನುವ ತಾರತಮ್ಯ ವಿಲ್ಲದೆ ಎಲ್ಲರಿಗೂ ಗುಣಮಟ್ಟದ ಆರೋಗ್ಯ ಸೇವೆ ನೀಡಲು ರಾಜ್ಯ ಸರ್ಕಾರ ಕಂಕಣ ಬದ್ಧವಾಗಿದೆ. ಸಾರ್ವಜನಿಕ ಆರೋಗ್ಯ ರಕ್ಷಣೆ ಯೋಜನೆ ಜಾರಿಗೆ ತರಲಾಗುತ್ತಿದೆ.





ನಿಟ್ಟಿನಲ್ಲಿ ಸರ್ಕಾರ ದಾಪುಗಾಲಿಟ್ಟಿದೆ. ಸರ್ಕಾರಿ ಆಸ್ಪತ್ರೆಗಳಿಗಂಟಿದ ಅಪವಾದದ ಕೊಳೆಯನ್ನು ತೊಳೆದು ಹಾಕುವ ಮೂಲಕ ಜನ ಸಾಮಾನ್ಯರಲ್ಲಿ ವಿಶ್ವಾಸ ಮೂಡಿಸುವ ಮತ್ತು ಎಲ್ಲ ವರ್ಗದ ರೋಗಿಗಳು ಸರ್ಕಾರಿ ಆಸ್ಪತ್ರೆಯತ್ತ ಮುಖ ಮಾಡುವ ಕೆಲಸ ರಮೇಶ್ ಕುಮಾರ್ ಮಾಡಿದ್ದಾರೆ.

## 'ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ'

ಇದು ಆರೋಗ್ಯ ಇಲಾಖೆಯ ಮೂಲ ಮಂತ್ರ. ಇದರ ಉದ್ದೇಶವಿಷ್ಟೇ: ರಾಜ್ಯದ ಎಲ್ಲ ಜನರಿಗೂ ಯಾವುದೇ ತಾರತಮ್ಯವಿಲ್ಲದೆ ಗುಣಮಟ್ಟದ ಆರೋಗ್ಯ ಸೇವೆ ನೀಡುವುದು. ಸಮಗ್ರ ಮತ್ತು ಉತ್ತಮ ಆರೋಗ್ಯ ಸೇವೆಗಳು ಎಲ್ಲರಿಗೂ ಸಮಾನವಾಗಿ ಸಿಗಬೇಕು. ಆಯುಷ್ ಅನ್ನು ಆರೋಗ್ಯ ರಕ್ಷಣೆಯ ಭಾಗವಾಗಿಸುವುದು. ಹೆಚ್ಚು ಜನರಿಗೆ ಇದು ಸಿಗುವಂತೆ ಮಾಡುವುದು. ಇದಕ್ಕಾಗಿ ರಾಜ್ಯ ಸರ್ಕಾರ ಹಲವು ಹೊಸ ಕಾರ್ಯಕ್ರಮಗಳನ್ನು ಜಾರಿ ಮಾಡಿದೆ.

ಇದರಲ್ಲಿ ಜನಪ್ರಿಯವಾದ ಯೋಜನೆಗಳೆಂದರೆ, ಪ್ರಸೂತಿ ಆರೈಕೆ, ತಾಯಿ ಭಾಗ್ಯ, ಜನನಿ, ಸುರಕ್ಷಾ ಯೋಜನೆ, ಜನನಿ ಶಿಶು ಸುರಕ್ಷಾ ಕಾರ್ಯಕ್ರಮ, ಪಲ್ಸ್ ಪೋಲಿಯೋ, ಎಂಸಿಟಿಎಸ್, ಪೌಷ್ಟಿಕತೆ ಕಾರ್ಯಕ್ರಮ, ವಾಜಪೇಯಿ ಆರೋಗ್ಯ ಶ್ರೀ, ರಾಜೀವ್ ಆರೋಗ್ಯ ಭಾಗ್ಯ, ಆರೋಗ್ಯ ಕವಚ–108, ಬೈಕ್ ಆ್ಯಂಬುಲೆನ್ಸ್, ಆರೋಗ್ಯ ಸಹಾಯವಾಣಿ–104, ಹಿರಿಯ ನಾಗರಿಕರಿಗೆ ಚಿಕಿತ್ಸೆ, ಸುಟ್ಟಗಾಯಗಳಿಗೆ ಚಿಕಿತ್ಸೆ, ಡಯಾಲಿಸಿಸ್, ಮೊಬೈಲ್ ವೈದ್ಯಕೀಯ ಘಟಕ, ಆರೋಗ್ಯ ಬಂಧು ಕಾರ್ಯಕ್ರಮ, ಸುವರ್ಣ ಆರೋಗ್ಯ ಚೈತನ್ಯ, ಮಾನಸಧಾರ, ಮಾನಸ ಚೈತನ್ಯ ಪ್ರಮುಖವಾದವು. 'ಆರೋಗ್ಯ ಕವಚ 108' ಅಡಿ 711 ವಾಹನಗಳು ಕಾರ್ಯ ನಿರ್ವಹಿಸುತ್ತಿವೆ., 104 ಆರೋಗ್ಯ ಸಹಾಯವಾಣಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಹಾಗೂ 30 ಬೈಕ್ ಆಂಬುಲೆನ್ಸ್ ಕಾರ್ಯನಿರ್ವಹಿಸುತ್ತಿವೆ



## ಬದಲಾದ ಮನಸ್ಥಿತಿ, ಬದಲಾದ ವಾತಾವರಣ

ಒಂದು ಕಾಲವಿತ್ತು, ಸರ್ಕಾರಿ ಆಸ್ಪತ್ರೆಗಳೆಂದರೆ ಜನ ಮೂಗು ಮುರಿಯುತ್ತಿದ್ದರು. ನಿರ್ಗತಿಕರು ಮಾತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಹೋಗುತ್ತಾರೆ ಎಂಬ ಕಲ್ಪನೆ ಇತ್ತು. ಸಣ್ಣ– ಪುಟ್ಟ ಜ್ವರದಿಂದ ಹಿಡಿದು ಮಾರಣಾಂತಿಕ ಕ್ಯಾನ್ಸರ್, ಹೃದ್ರೋಗಕ್ಕೆ ಚಿಕಿತ್ಸೆ ಪಡೆಯಲು ಖಾಸಗಿ ಆಸ್ಪತ್ರೆಗಳ ಮೊರೆ ಹೋಗುತ್ತಿದ್ದರು. ಇದಕ್ಕೆ ಮುಖ್ಯ ಕಾರಣ ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆ. ಸ್ವಚ್ಛತೆ ಕೊರತೆ, ಔಷಧಿಗಳ ಲಭ್ಯತೆ ಇಲ್ಲದಿರುವುದು, ತಜ್ಞ ವೈದ್ಯರ ಕೊರತೆ ಮತ್ತು ಗುಣಮಟ್ಟದ ಚಿಕಿತ್ಸೆ ಸಿಗದೇ ಇರುವುದು. ಆದರೆ,



''ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ''